**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ ಸಿ ಸಂಃ 446/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮಧುಕುಮಾರ್ | ಫ್ರಾಸಾಃಃ 4 |
| ತಂದೆ ಹೆಸರುಃ | ಹೆಗ್ಗಪ್ಪ | ಚಾಸಾಃಃ 8 |
| ವಯಸ್ಸುಃ | 38 ವರ್ಷ | ಪ್ರಮಾಣೀಕರಿಸಿದ<br>ದಿಃ 02.04.2026 |
| ಉದ್ಯೋಗಃ | ಹೆಚ್ ಸಿ-09, ಪಿರಿಯಾಪಟ್ಟಣ ಪೊಲೀಸ್ ಠಾಣೆ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನಾನು ದಿಃ 07.07.2014 ರಿಂದ 21.03.2019 ರವರೆಗೆ ಬೆಟ್ಟದಪುರ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2.ದಿಃ 19/02/2017 ರಂದು ಬೆಳಿಗ್ಗೆ 4.00 ಜಾವದಲ್ಲಿ ಚಾಸಾ-1 ರವರಿಗೆ ಬಂದ ಖಚಿತ ಮಾಹಿತಿ ಏನಂದರೆ ಮರಟಿಕೊಪ್ಪಲಿನ ಶೇಖರ್ ರವರ ಜಮೀನಿನ ಬಳಿಯಲ್ಲಿ ಕಾವೇರಿ ಹೊಳೆಯ ಅಂಚಿನಲ್ಲಿ ಅಕ್ರಮವಾಗಿ ಮರಳು ತುಂಬುತ್ತಿರುವ ಬಗ್ಗೆ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು, ಕೂಡಲೇ ಸಿಬ್ಬಂದಿಗಳಾದ ನನಗೆ, ಚಾಸಾ-9 ಮತ್ತು 10 ರವನ್ನು ಬರಮಾಡಿಕೊಂಡು ಪಂಚರಾದ ಫ್ರಾಸಾ-1 ಮತ್ತು 3 ರವರನ್ನು ಬರಮಾಡಿಕೊಂಡು ಚಾಸಾ-1 ರವರಿಗೆ ಬಂದ ಮಾಹಿತಿಯನ್ನು ನಮಗೆ ತಿಳಿಸಿ, ದಾಳಿ ಮಾಡುವ ಸಂದರ್ಭದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಒಂದು ಖಾಸಗಿ ವಾಹನದಲ್ಲಿ ಒಟ್ಟಿಗೆ ತೆರಳಿದೆವು. ಸುಮಾರು 4.45 ಗಂಟೆಗೆ ಬಂದ ಮಾಹಿತಿ ಮೇರೆಗೆ ಆ ಸ್ಥಳಕ್ಕೆ ತೆರಳಿ ಸ್ವಲ್ಪ ದೂರದಲ್ಲಿ ನಿಂತು ಮರೆಯಾಗಿ ನೋಡಲಾಗಿ ಒಂದು ಟ್ರಾಕ್ಟರ್ ಮತ್ತು

ಟ್ರಾಲಿಯಲ್ಲಿ 3 ಜನರು ಮರಳನ್ನು ತುಂಬುತ್ತಿರುವುದು ಕಂಡುಬಂದಿದ್ದು, ಅದನ್ನು ಖಚಿತಪಡಿಸಿಕೊಂಡು ನಾವು ಅವರನ್ನು ಹಿಡಿಯಲು ಸುತ್ತುವರೆದಾಗ ಅವರು ನಮ್ಮಿಂದ ತಪ್ಪಿಸಿಕೊಂಡು ಹೋಗಿರುತ್ತಾರೆ. ನಂತರ ಅವರಗಳ ಬಗ್ಗೆ ಮಾಹಿತಿ ತಿಳಿಯಲಾಗಿ ಅವರ ಹೆಸರು ತೀರ್ಥ, ರಾಮಚಂದ್ರ, ಶ್ರೀನಿವಾಸ ಎಂದು ತಿಳಿದು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಬೆಳಿಗ್ಗೆ 5.00 ರಿಂದ 6.00 ಗಂಟೆ ವರೆಗೆ ಸ್ಥಳದಲ್ಲಿದ್ದಂತಹ ಟ್ರಾಕ್ಟರ್ ನಂಬರ್ ಕೆಎ–45–ಟಿ–8396, ವಾಹನವನ್ನು ಅಮಾನತ್ತು ಪಡಿಸಿಕೊಂಡು, ಮಹಜರ್ ಕ್ರಮ ಜರುಗಿಸಿ, ವಾಪಸ್ಸು ಠಾಣೆಗೆ ಬಂದು ಚಾಸಾ–1 ರವರು ತಮ್ಮ ವರದಿಯನ್ನು ಠಾಣಾ ಎಸ್.ಹೆಚ್.ಒ.ರವರಿಗೆ ನೀಡಿರುತ್ತಾರೆ. ಟ್ರಾಕ್ಟರ್ ನ ಟ್ರಾಲಿಯಲ್ಲಿ ಸುಮಾರು 60 ಬಾಂಡಲಿಯಷ್ಟು ಮರಳು ಇತ್ತು. ಮರಳನ್ನು ತುಂಬಲು ಉಪಯೋಗಿಸುತ್ತಿದ್ದ 2 ಗುದ್ದಲಿ ಮತ್ತು 2 ಬಾಂಡಲಿಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಈ ದಿನ ನ್ಯಾಯಾಲಯದಲ್ಲಿ 2 ಗುದ್ದಲಿ ಮತು 2 ಬಾಂಡಲಿಗಳು ಇವೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ. ನಾವು ದಾಳಿಮಾಡಿದಂತಹ ಸಮಯದಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ಆರೋಪಿ ಪರ ವಕೀಲರು ತಕರಾರು ಮಾಡಿರುವುದಿಲ್ಲ. ನಾನು ಈ ಸಂಬಂಧ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ** ಆರೋಪಿತರ **ಪರ ಶ್ರೀ** ಡಿ.ಪಿ.ಎಲ್**. ವಕೀಲರಿಂದಃ**

3. ಮಾಹಿತಿ ಬಂದಾಗ ನಾನು ಬೆಟ್ಟದಪುರ ಕ್ವಾಟ್ರಸ್ ನಲ್ಲಿ ಇದ್ದೆ. ನಾನು ಕರ್ತವ್ಯದಲ್ಲಿ ಇರಲಿಲ್ಲ, ಆದರೆ ಮನೆಯಲ್ಲಿ ಇದ್ದೆ. ಚಾಸಾ–1 ರವರು ನನ್ನನ್ನು ಬರಮಾಡಿಕೊಂಡರು. ಆ ದಿನ ಠಾಣಾ ಉಸ್ತುವಾರಿಯಾಗಿ ಚಾಸಾ–1 ರವರೇ ಇದ್ದರು. ಚಾಸಾ–1 ರವರು ಮೌಖಿಕವಾಗಿ ನನ್ನನ್ನು ಕರೆದರು. ಸ್ಥಳ ಕ್ಕೆ ಚಾಸಾ–1 ರವರೊಂದಿಗೆ ಚಾಸಾ–9 ಮತ್ತು 10 ಹಾಗೂ ಪಂಚರು ಹೋದೆವು. ಠಾಣೆಯಿಂದಲೇ ಎಲ್ಲರೂ ಇಲಾಖಾ ಜೀಪಿನಲ್ಲಿ ಹೋದೆವು. ಮರಟಿ ಕೊಪ್ಪಲು ಗ್ರಾಮಕ್ಕೆ ಚಪ್ಪರದಹಳ್ಳಿ ಮತ್ತು ಅಂಬಲಾರೆ ಗ್ರಾಮಗಳ ಮುಖಾಂತರ ತಲುಪಿದೆವು. ಸ್ಥಳಕ್ಕೆ ಹೋದಾಗ ಬೆಳಗಿನ ಜಾವ

4.40 ಗಂಟೆ ಆಗಿತ್ತು. ಸ್ಥಳಕ್ಕೆ ಹೋಗುವ ಮಧ್ಯದಲ್ಲಿ ಗಾಡಿಯನ್ನು ಎಲ್ಲೂ ನಿಲ್ಲಿಸಿಲ್ಲ, ಎಲ್ಲೂ ಗಸ್ತು ಮಾಡಿಲ್ಲ. ಆರೋಪಿತರನ್ನು 100 ಮೀಟರ್ ಅಂತರದಿಂದ ಗಮನಿಸಿದೆವು. 5 ನಿಮಿಷಗಳ ಕಾಲ ಮರೆಯಲ್ಲಿ ನಿಂತು ಗಮನಿಸಿದೆವು. ನಾವು ಸ್ಥಳಕ್ಕೆ ಹೋದಾಗ ತುಂಬಾ ಕತ್ತಲು ಇತ್ತು ಎಂದರೆ ಸರಿ. ದೂರದಿಂದ ಯಾವ ವ್ಯಕ್ತಿ ಎಂದು ಕಾಣಿಸಿರಲಿಲ್ಲ ಎಂದರೆ ಸರಿ. ಬಾತ್ಮಿದಾರರಿಂದ ಆ ವ್ಯಕ್ತಿಗಳು ಯಾರು ಎಂದು ಕೇಳಿ ತಿಳಿದುಕೊಂಡೆವು. ನಾವು ಹಿಡಿಯಲು ಹೋದಾಗ ಅವರು ಸ್ಥಳದಿಂದ ಪರಾರಿ ಆದರು. ಸ್ಥಳದಲ್ಲಿ ಸ್ಥಳ ಮಹಜರು ಬರೆದೆವು. ಮಲ್ಲೇಶ ರವರು ಸ್ಥಳ ಮಹಜರು ಬರೆದರು. ಸ್ಥಳದಲ್ಲಿ ಟಾರ್ಚ್ ಲೈಟ್ ಉಪಯೋಗಿಸಿ ಸ್ಥಳ ಮಹಜರು ಬರೆದೆವು. ಸ್ಥಳ ಮಹಜರಿಗೆ ನಾನು ಸಹಿ ಮಾಡಿಲ್ಲ. ನನ್ನನ್ನು ಸಹಿ ಮಾಡಲು ತಿಳಿಸಿಲ್ಲ. ಮೋಹನ ಮತ್ತು ಕೃಷ್ಣ ಎಂಬುವವವರು ಸ್ಥಳ ಮಹಜರಿಗೆ ಸಹಿ ಮಾಡಿದ್ದಾರೆ. ಮಾಹಿತಿ ತಿಳಿದು ಚಾಸಾ-1 ರವರೊಂದಿಗೆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಹೋದಾಗ ಆರೋಪಿತರು ಓಡಿ ಹೋದರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರು ಬರೆದಿಲ್ಲ ಎಂದರೆ ಸರಿಯಲ್ಲ. ನಾನು ದಿಃ 19.02.2017 ರಂದು ನನ್ನ ಹೇಳಿಕೆ ನೀಡಿರುತ್ತೇನೆ. ನಾನು ಆದಿನ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಲು ಮೇಲಾದಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಾಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**